ರಾಜ್ಯದಲ್ಲಿರುವ ಪೌರಾಡಳಿತ & ಸ್ಥಳೀಯ ಸಂಸ್ಥೆಯ ಅಭಿವೃದ್ಧಿ ಯೋಜನೆಗಳು

142 (462) ಶ್ರೀ ಹ್ಯಾರೀಸ್ ಎನ್.ಎ (ಶಾಂತಿನಗರ) : ಮಾನ್ಯ ಪೌರಾಡಳಿತ, ಸ್ಥಳೀಯ ಸಂಸ್ಥೆಗಳ ಮತ್ತು ಸಾರ್ವಜನಿಕ ಉದ್ಯಮಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಪೌರಾಡಳಿತ ಮತ್ತು ಸ್ಥಳೀಯ ಸಂಸ್ಥೆಗಳ ಒಟ್ಟು ಸಂಖ್ಯೆಗಳು ಹಾಗೂ ಅವುಗಳ ಅಭಿವೃದ್ಧಿಗಾಗಿ ಸರ್ಕಾರದ ನೂತನ ಯೋಜನೆಗಳಾವುವು (ಮಾಹಿತಿ ನೀಡುವುದು);

ಆ) ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ವಿವಿಧ ಯೋಜನೆಗಳಡಿಯಲ್ಲಿ ಈ ಸಂಸ್ಥೆಗಳಿಗೆ ಮಂಜೂರು ಮಾಡಿರುವ ಮೊತ್ತ ಎಷ್ಟು;

ಇ) ಈ ಸಂಸ್ಥೆಗಳ ಅಭಿವೃದ್ಧಿಗಾಗಿ ಕೇಂದ್ರ ಸರ್ಕಾರ ಮಂಜೂರು ಮಾಡಿರುವ ಮೊತ್ತವನ್ನು ಪೂರ್ಣ ಪ್ರಮಾಣದಲ್ಲಿ ಬಳಕೆ ಮಾಡಲಾಗಿದೆಯೇ;

ಈ) ಈ ಸಂಸ್ಥೆಗಳಿಗೆ ಯಾವ್ಯಾವ ಮೂಲಗಳಿಂದ ತೆರಿಗೆ ರೂಪದ ಹಣ ಸಂಗ್ರಹಣೆಯ ಅವಕಾಶಗಳಿವೆ (ಮಾಹಿತಿ ನೀಡುವುದು)?

ಶ್ರೀ ಬಾಲಚಂದ್ರ ಜಾರಕಿಹೋಳಿ (ಪೌರಾಡಳಿತ, ಸ್ಥಳೀಯ ಸಂಸ್ಥೆಗಳ ಮತ್ತು ಸಾರ್ವಜನಿಕ ಉದ್ಯಮಗಳ ಸಚಿವರು) :

ಅ) 214 (ಬಿಬಿಎಂಪಿ ಹೊರತುಪಡಿಸಿ)

ನೂತನ ಯೋಜನೆಗಳು :

2008–09–ರೂ. 100 ಕೋಟಿ ಯೋಜನೆ

2009–10:

1) ಮುಖ್ಯಮಂತ್ರಿಗಳ ಸಣ್ಣ ಮತ್ತು ಮಧ್ಯಮ ಪಟ್ಟಣಗಳ ಅಭಿವೃದ್ಧಿ ಯೋಜನೆ.

2) ಐ.ಎಸ್.ಎಚ್.ಯು.ಪಿ (Interest Subsidy for Housing Urban Poor)

ಆ) (ರೂ.ಕೋಟಿಗಳಲ್ಲಿ)

		ರಾಜ್ಯ	ಕೇಂದ್ರ
1.	ಎಸ್ .ಎಫ್.ಸಿ. ಮುಕ್ತ ನಿಧಿ (2009–10) ಜನವರಿ 2010ರ ವರೆಗೆ	2894.21	--
2.	12ನೇ ಹಣಕಾಸು	484.00	--
3.	UIDSSMT	35.91	291.99
4.	C.M.S.M.T.D.P	1304.63	--
5.	ಮುಖ್ಯಮಂತ್ರಿಗಳ 100 ಕೋಟಿ ಯೋಜನೆ	312.00	--

ಇ)

- 12ನೇ ಹಣಕಾಸು ಯೋಜನೆಯಲ್ಲಿ ಈವರೆಗೆ ರೂ.374.40 ಕೋಟಿ ಕೇಂದ್ರದ ಅನುದಾನ ಖರ್ಚಾಗಿದ್ದು, ಶೇ.77.36ರಷ್ಟು ಪ್ರಗತಿಯಾಗಿರುತ್ತದೆ.
- ಯು.ಐ.ಡಿ.ಎಸ್.ಎಸ್.ಎಂ.ಟಿ ಯೋಜನೆಯಲ್ಲಿ ಒಟ್ಟು ಬಿಡುಗಡೆಯಾದ ಅನುದಾನದಲ್ಲಿ ರೂ.298.00 ಕೋಟಿಗಳ ಮೊತ್ತ ಈವರೆವಿಗೆ ಖರ್ಚಾಗಿದ್ದು ಶೇ.90.85 ರಷ್ಟು ಪ್ರಗತಿಯಾಗಿರುತ್ತದೆ.

ಈ) 1) ಆಸ್ತಿ ತೆರಿಗೆ
2) ನೀರಿನ ತೆರಿಗೆ
3) ಜಾಹಿರಾತು ತೆರಿಗೆ